ನಿಯಮ ೩೩ಳಿರ ಮೇರೆಗೆ

ಚಾಮರಾಜನಗರ ಕೊಳ್ಳೇಗಾಲ ರಸ್ತೆಯನ್ನು ಅಗಲ ಮಾಡಿಸುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್. – (ಚಾಮರಾಜನಗರ) ಮಾನ್ಯ ಅಧ್ಯಕ್ಷರೇ, ಚಾಮರಾಜನಗರ ಕೊಳ್ಳೇಗಾಲ ರಸ್ತೆಯು ಬಹಳ ಪ್ರಮುಖವಾದ ರಸ್ತೆಯಾಗಿದ್ದು ಅಷ್ಟೆ ಅಲಕ್ಷಿಸಲ್ಪಟ್ಟ ರಸ್ತೆಯಾಗಿದೆ. ಇಲ್ಲಿ ಖಾಸಗಿ ಬಸ್ಸುಗಳು, ಸಾರಿಗೆ ಸಂಸ್ಥೆ ಬಸ್ಸುಗಳೂ ಸರಿಯಂತೆ ಸಾವಿರಾರು ವಾಹನಗಳು ದಿನವಿಡೀ ಸಂಚರಿಸುತ್ತವೆ. ರಸ್ತೆಯು ಬಹಳ ಕಿರಿದಾಗಿದ್ದು ಒಂದು ವಾಹನಪೂಕೂಡ ಸುಗಮವಾಗಿ ಸಂಚರಿಸಲು ಆಗುತ್ತಿಲ್ಲ. ಈ ಭಾಗದ ಭೂಮಿ ಕಪ್ಪು ಎರೆ ಮಣ್ಣಿನ ಭೂಮಿ ಆಗಿದ್ದು ಮಳೆ ಬಿದ್ದಲ್ಲಿ, ವಾಹನಗಳು ಟಾರಾ ರಸ್ತೆಯನ್ನು ಬಿಟ್ಟು ಕೆಳಗೆ ಇಳಿದಲ್ಲಿ ಉರುಳಿಬಿದ್ದು ಅಪಘಾತಕ್ಕೆ ಈಡಾಗಿ ಸಾವು ನೋವುಗಳು ಸಂಭವಿಸುವ ಸಂದರ್ಭ ಇದೆ. ಅಲ್ಲದೆ ಈ ರಸ್ತೆಯು ಯೆಳಂದೂರು, ಮದ್ದೂರು, ಆಗರ. ಮಾಂಬಳ್ಳಿ ಇಲ್ಲೆಲ್ಲಾ ಊರಿನ ಮಧ್ಯಭಾಗದಲ್ಲಿ ಹಾದು ಹೋಗಬೇಕಾಗಿದ್ದು, ರಸ್ತೆಯು ಇಲ್ಲಿ ಬಹಳ ಕಿರಿದಾದ ಕಾರಣ ದಿನಾ ಸಣ್ಣ ಪುಟ್ಟ ಅಪಘಾತಗಳು ಸಂಭವಿಸುತ್ತಲೇ ಇರುತ್ತವೆ. ಈಚೆಗೆ ಮದ್ದೂರು ಬಳಿ ವಾಹನವೊಂದು ರಸ್ತೆ ಬದಿಯಲ್ಲಿ ನಿಂತಿದ್ದವರ ಮೇಲೆ ಹರಿದು ಒಬ್ಬನು ಮೃತಪಟ್ಟ ಘಟನೆ ವರದಿಯಾಗಿದೆ. ಆದಕಾರಣ ಇಲ್ಲೆಲ್ಲಾ ಬೈಪಾಸ್ ರಸ್ತೆಗಳನ್ನು ಮಾಡಬೇಕು. ಕೂಡಲೇ ಈ ರಸ್ತೆಯನ್ನು ಆದ್ಯತೆಯ ಮೇಲೆ ತೆಗೆದುಕೆಂಡು ಊರ ಹೊರಗಡೆ ಹೋಗುವಂತಹ ಬೈಪಾಸ್ ರಸ್ತೆ ಮಾಡಬೇಕು. ಎರಡು ವಾಹನಗಳು ಸುಗಮವಾಗಿ ಸಂಚರಿಸುವಂತೆ ಅಗಲ ಮಾಡುವುದು, ರಿಪೇರಿ ಮಾಡುವುದು ಮುಂತಾದ ಕಾರ್ಯಕ್ರಮಗಳನ್ನು ತೀವ್ರಗತಿಯಿಂದ ತೆಗೆದು ಕೊಳ್ಳಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಮಾನ್ಯ ಸಚಿವರು ತಾವೇ ಖುದ್ದಾಗಿ ಈ ರಸ್ತೆಗಳಲ್ಲಿ ಪ್ರವಾಸ ಮಾಡಿ ಇದರ ದುಸ್ಥಿತಿಯನ್ನು ವೀಕ್ಷಿಸಿ ಮುಂದಿನ ಕ್ರಮಕ್ಕೆ ಆಜ್ಞೆ ಮಾಡಬೇಕಾಗಿ ಕೋರುತ್ತೇನೆ

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ನೀರಾವರಿ ಮತ್ತು ಲೋಕೋಪಯೋಗಿ ಸಚಿವರ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.

ಚಾಮರಾಜನಗರ. –ಕೊಳ್ಳೇಗಾಲ ರಸ್ತೆಯು ಸುಮಾರು ೨೫ ಕಿ.ಮೀ. ಉದ್ದವಿದ್ದು ಇದು ಜಿಲ್ಲಾ ಮುಖ್ಯರಸ್ತೆಯಾಗಿದೆ. ಈ ರಸ್ತೆಯು ಕಬಿನಿ ಬಲದಂಡೆ ನಾಲೆಯ ಅಚ್ಚುಕಟ್ಟು ಪ್ರದೇಶದಲ್ಲಿ ಹಾದು ಹೋಗುತ್ತದೆ. ಅಲ್ಲದೆ ಇದು ಕಪ್ಪು ಎರೆಮಣ್ಣು ಪ್ರದೇಶವಾಗಿದೆ. ಆದುದರಿಂದ ರಸ್ತೆಯು ನಾಡುದುರಸ್ಥಿಯಲ್ಲಿದೆ. ಈ ರಸ್ತೆಯನ್ನು ಸೂಕ್ತವಾಗಿ ದುರಸ್ಥಿಪಡಿಸಿ, ಅಭಿವೃದ್ಧಿ ಪಡಿಸಲು ಜಿಲ್ಲಾ ವರಿ ಅನುದಾನವನ್ನು ನಿಗದಿಪಡಿಸಿ, ಉತ್ತಮ ಸ್ಥಿತಿಯಲ್ಲಿಡಲು ಎಲ್ಲಾ ಕ್ರಮವನ್ನು ತೆಗೆದು ಕೊಳ್ಳಲಾಗುವುದು. ಯಳಂದೂರು ಮುಂತಾದ ಊರಿಗೆ ಬೈಪಾಸ್ ರಸ್ತೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

(II) ಸುಬ್ರಹ್ಮಣ್ಯನಗರ ಮತ್ತು ಗಾಯಿತ್ರಿನಗರಗಳ ನಾಗರೀಕರಿಗೆ ಹೆಚ್ಚಿನ ಬಸ್ ಸೌಕರ್ಯ

ಶ್ರೀ ಕೆ. ಲಕ್ಕಣ್ಣ. (ರಾಜಾಜಿ ನಗರ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸಾಬೂನು ಕಾರ್ಖಾನೆ, ಸುಬ್ರಮಣ್ಯ ನಗರ, ಗಾಯಿತ್ರಿ ನಗರಗಳ ನಾಗರೀಕರು ಜಯನಗರಕ್ಕೆ ಹೋಗಬೇಕಾದರೆ ಕೇವಲ ಎರಡು ಬಸ್ಸುಗಳು (೧೭೮) ಮತ್ತು (೨೬೨ಸಿ) ಮಾತ್ರ ಇದ್ದು ಇವು ಸುಬ್ರಹ್ಮಣ್ಯ ನಗರದ ಮೂಲಕ ಹಾದುಹೋಗುವ ಸಮಯ ಈ ಕೆಳಕಂಡಂತಿದೆ. ರೂಟ್ ನಂ. (೨೬೨ಸಿ) ಪೀಣ್ಯ ೨ನೇ ಹಂತದಿಂದ ಜಯನಗರಕ್ಕೆ

ಪ್ರತಿ ೨ ಗಂಟೆಗೆ ಒಂದು ಸಾರಿಯಂತೆ ಬೆಳಿಗ್ಗೆಯಿಂದ: ೮.೫೫, ೧೦.೪೫, ೧.೪೫, ೨.೩೦, ೪.೩೫, ಇತ್ಯಾದಿ ಗಂಟೆಗಳಿಗೆ ರೂಟ್ ನಂ. (೧೭೮) ಕರ್ನಾಟಕ ಸಾಬೂನು ಕಾರ್ಖಾನೆಯಿಂದ ಜಯನಗರಕ್ಕೆ ಒಂದೂಕಾಲು ಗಂಟೆಗೆ ಒಮ್ಮೆ

ಬೆಳಿಗ್ಗೆಯಿಂದ: ೬.೪೫, ೭.೫೫, ೯.೧೦- ೧೦.೧೫, ೧೧.೫೦, ಇತ್ಯಾದಿ ಗಂಟೆಗಳಿಗೆ